ಬೆನ್ನಿಯ ಪ್ರಾಣಿಗಳು

ಮತ್ತು ಅವನು ಅವುಗಳನ್ನು ಗುಂಪಾಗಿಸಿದ ರೀತಿ

ಮಿಲಸೆಂಟ್ ಸೆಲ್ಸ್ಯಾಮ್

ಕನ್ನಡ : ಸಬಿತಾ



ಬೆನ್ನಿಯ ಪ್ರಾಣಿಗಳು
ಮತ್ತು ಅವನು ಅವುಗಳನ್ನು ಜೋಡಿಸಿದ ರೀತಿ

ಮಿಲಸೆಂಟ್ ಸೆಲ್ಸ್ಯಾಮ್

ಕನ್ನಡ : ಸಬಿತಾ



ಬೆನ್ನಿ ಒಬ್ಬ ಶುದ್ಧ ಬಾಲಕನಾಗಿದ.

ಅವನು ಎಲವನ್ನೂ ಅಚ್ಚುಕಟ್ಟಾಗಿಡಲು

ಬಯಸುತ್ತಿದ್ದನು .

ದೊಡ್ಡ ಪುಸ್ತಕಗಳಿಗಾಗಿ ಅವನು ಒಂದು ಜಾಗವನ್ನು ಇಟ್ಟುಕೊಂಡಿದ್ದನು .

ಅವನ ಚಿಕ್ಕ ಪುಸ್ತಕಗಳಿಗಾಗಿ ಬೇರೊಂದು ಜಾಗವಿತ್ತು.

ಅವನ ಬಳಿಇದ್ದ ಮಧ್ಯಮ ಗಾತ್ರದ ಪುಸ್ತಕಗಳಿಗಾಳಿ ಮತ್ತೊಂದು ಸ್ಥಳವಿತ್ತು

ಅವನ ಬಳಿ ಅನೇಕ ನಾಣ್ಯಗಳು ಸೇರಿದಾಗ ಅವನು ನಾಕಾಣೆಯ ಒಂದು ರಾಶಿ, ಎಂಟಾಣೆಯ ಮತ್ತೊಂದು ರಾಶಿ ಮತ್ತು ಒಂದು ರೂಪಾಯಿನ ನಾಣ್ಯಗಳನ್ನು ಮೂರನೇಯ ರಾಶಿ ಮಾಡುತ್ತಿದ್ದ.

ಒಂದು ದಿನ ಬೆನ್ನಿಯಾ ತಾಯಿ ಅವನ ತಂದೆಯನ್ನು ಕೇಳಿದರು, "ಬೆನ್ನಿ ಸರಿಯಾಗಿದ್ದನ? ಅವನ ಬಗ್ಗೆ ನಿಮಗೇನನ್ನಿಸುತ್ತೆ,

ಡೇವಿಡ್ ಅವರ ತಾಯಿ ಹೇಳುತ್ತಾರೆ ಡೇವಿಡ್ ತನ್ನ ವಸ್ತುಗಳನ್ನು ನೆಲದ ಮೇಲೆ ಎಸಾಯುತ್ತಾನೆ ಎಂದು.

ಮತ್ತು ಜಾನ್ ಅವರ ತಾಯಿ ಹೇಳುತ್ತಾರೆ . ಜಾನ್ ತನ್ನ ವಸ್ತುಗಳನ್ನು ಎಂದಿಗೂ ಸರಿಯಾದ ಜಗದಲಿ ಇಡುವುದಿಲ್ಲ

ಆದರೆ ಬೆನ್ನಿ ತನ್ನ ವಸ್ತುಗಳನ್ನು ಯಾವಾಗಲು ಸರಿಯಾದ ಜಾಗದಲ್ಲಿ ಇಡುತ್ತಾನೆ”

ಬೆನ್ನಿಯ ತಂದೆ ಹೇಳಿದರು "ಅವನ ಬಗ್ಗೆ ಚಿಂತಿಸಬೇಡಿ, ಅವನು ಕೇವಲ ಅಚ್ಚುಕಟ್ಟಾದ ಹುಡುಗ".

ಒಂದು ದಿನ ಬೆನ್ನಿ ಕಡಲ ತೀರದಲ್ಲಿ ವಾಕ್ ಮಾಡಲು ಹೋದನು. ಅವನು ಅಲ್ಲಿ ಬಹಳಷ್ಟು ವಸ್ತುಗಳನ್ನುಕಂಡನು.

ಅವನು ಅವುಗಳನ್ನು ಒಂದು ಕಾಗದದ ಚೀಲದಲ್ಲಿ ಸಂಗ್ರಹಿಸಿದನು.

ಮನೆಗೆ ಬಂದ ಮೇಲೆ ಅವನು ಚೀಲದಿಂದ ಆ ವಸ್ತುಗಳನ್ನು ಹೊರಗಡೆ ಹಾಕಿ ನೋಡಿದ

ಕೆಲವು ಈ ರೀತಿ ಕಂಡವು

ಕೆಲವು ಈ ರೀತಿ ಕಂಡವು

ಮತ್ತೆಕೆಲವು ಈ ರೀತಿ

ಒಂದು ಹೀಗೆ ಇತ್ತು,

ಮತ್ತೊಂದು ಹೀಗೆ

ಬೆನ್ನಿ ನೆ ತನ್ನ ತಾಯಿಯನ್ನು ಕರೆದ

"ಅಮ್ಮ" ಅವನು ಕೇಳಿದ,

"ನಿಮಗೆ ಈ ವಸ್ತುಗಳ ಬಗ್ಗೆ ಏನಾದರು ಮಾಹಿತಿ

ಉಂಟೇ"?

"ಅವು ಪ್ರಾಣಿಗಳ ಚಿಪ್ಪುಗಳು " ಎಂದು ಬೆನ್ನಿ

ಅವರ ಅಮ್ಮ ಉತ್ತರಿಸಿದರು.

ಬೆನ್ನಿ ಅಮ್ಮ ನಿಗೆ ಹೇಳಿದಾ : "ಚಿಪ್ಪು - ಶಂಕಾ

ಮತ್ತು ಪ್ರಾಣಿಗಳ ನಡುವೆ ಸಂಬಂಧ

ಇದೆಯೆಂದು ನನಗೆ ತಿಳದಿರಲಿಲ್ಲ"

ಅಮ್ಮ ಉತ್ತರಿಸಿದರು, " ಕೆಲವು ಸಮುದ್ರ ಜೀವಿಗಳು ಸಮುದ್ರದ ನೀರಿನಲ್ಲಿರುವ ಖನಿಜಗಳಿಂದ ಚಿಪ್ಪು, ಶಂಖ ಮತ್ತು ಇತರ ಶೆಲ್ ಗಳಿಂದ ಅವರ ಗೂಡನ್ನು ಕಟ್ಟುತ್ತಾರೆ ಅನುವುದು ನಿಜಾ".

ಇದು ಒಂದು ಚಿಪ್ಪುಜೀವಿ (ಮೃದ್ವಂಗಿ),

ಮತ್ತು ಇದು ಒಂದು ಇಚಿಪ್ಪುಮೀನು (ಸ್ಕ್ಯಾಲಪ್).

ಆ ಗೋಲಾಕಾರದ ಜೀವದ ಬಗ್ಗೆ ನನಗೆ ಮಾಹಿತಿ ಇಲ್ಲಾ , ನಾವು ಪುಸ್ತಕಗಳಲ್ಲಿ ಅದರ ಬಗ್ಗೆ ಹುಡುಕೋಣ ".

ಬೆನ್ನಿಯ ಅಮ್ಮ ಅವನಿಗೆ ಸಮುದ್ರ ಜೀವಿಗಳ ಚಿತ್ರವಿರುವ ಒಂದು ಪುಸ್ತಕವನ್ನು ಕೊಟ್ಟರು. ಅವನು ಆ ಚಿತ್ರಗಳನ್ನು ಆಸಕ್ತಿಯೊಂದಿಗೆ ನೋಡಿದ.

ನಂತರ ಅವನು ಅನೇಕ ಬಿಂದುಗಳನ್ನು ಹೊಂದಿರುವ ಒಂದು ಕೋನ್ ಅನ್ನು (ಚಿಪ್ಪನ್ನು) ನೋಡಿದನು. ಅದು ಒಂದು ನಕ್ಷತ್ರಮೀನ್ನಗಿತ್ತು. ಅದಾದ ಮೇಲೆ ಅವನು ಅನೇಕ ಕಾಲುಗಳಿರುವ ಒಂದು ಚಿಪ್ಪನ್ನು ನೋಡಿದನು, ಅದು ಒಂದು ಏಡಿ.

ಬೆನ್ನಿ ಅವನ ಕೊಠಡಿಗೆ ಮರಳಿದ.
ಅವನು ಎಲಾ ದೊಡ್ಡ ಚಿಪ್ಪಿಗಳನ್ನು ಒಂದು ಗುಡ್ಡೆ ಮಡಿದ.
ಮತ್ತು ಎಲಾ ಇಚಿಪ್ಪುಮೀನು (ಸ್ಕ್ಯಾಲ್ಲಪ್) ಗಳನ್ನೂ ಒಂದು ಗುಡ್ಡೆ ಮಡಿದ. ಅವನು ಬಿಂದುಗಳಿರುವ ಚಿಪ್ಪನ್ನು ಒಂದು ಕಡೆ ಸೇರಿಸಿದ.
ನಕ್ಷತ್ರಮೀನು ಮತ್ತು ಏಡಿಗಳನ್ನೂ ಬೇರೆ ಬೇರೆಯಾಗಿ ಇಟ್ಟ.
ನಂತರ ಅವನು ಒಂದು ನಾಮ ಫಲಕ ಮಾಡಿ ಅದರಮೇಲೆ
"ಕಡಲಿನ ಜೀವಿಗಳು" ಎಂದು ಬರೆದ .

ಬೆನ್ನಿಯ ಗೆಳೆಯ ಜಾನ್ ಅವನನ್ನು ಭೇಟಿಯಾಗಲು ಬಂದಾ . ಅವನು ನಾಮಫಲಕವನ್ನು ನೋಡಿ ಬೆನ್ನಿಯನ್ನು ಕೇಳಿದ,:"ಇವುಗಳನ್ನುನೀನು ಪ್ರಾಣಿಗಳೆಂದು ಏಕೆ ಕರೆಯುತಿಯ?" "ಅವುಗಳು ವಾಸ್ತವಿಕವಾಗಿ ಪ್ರಾಣಿಗಳು, ಅದರಿಂದ", ಬೆನ್ನಿ ಉತ್ತರಿಸಿದ.

ಅದಕ್ಕೆ ಜಾನ್ ಹೇಳಿದ, "ನನ್ನ ಪ್ರಕಾರ ಇವು ಪ್ರಾಣಿಗಳಲ್ಲ".

"ಸರಿ, ಹಾಗಾದರೆ ನಿನ್ನ ಪ್ರಕಾರ ಪ್ರಾಣಿ ಯಾವುದು"? ಬೆನ್ನಿ ಕೇಳಿದ.

ಜಾನ್ ಉತ್ತರಿಸಿದ, :"ಕುದುರೆ, ಜೀಬ್ರಾ, ಬೆಕ್ಕು ಇವೆಲ್ಲ ಪ್ರಾಣಿಗಳು , ಆನೆಯು ಒಂದು ಪ್ರಾಣಿ, ಪ್ರಾಣಿಗಳಿಗೆ ತಲೆ, ಶರೀರ ಮತ್ತು ನಾಲ್ಕು ಕಾಲುಗಳು ಇರುತ್ತದೆ ".

ಬೆನ್ನಿ ಜಾನ್ ನ್ನು ಕೇಳಿದ, "ಪಕ್ಷಿಗಳು ಪ್ರಾಣಿಗಳಾ?"

ಜಾನ್ ಉತ್ತರಿಸಿದ,"ಪಕ್ಷಿಗಳಿಗೆ ಎರಡೆ ಕಾಲುಗಳಿವೆ, ಪಕ್ಷಿಗಳು ಪಕ್ಷಿಗಳು, ಅವು ಪ್ರಾಣಿಗಳಲ್ಲ".

"ಮತ್ತೆ ಮೀನು?" ಬೆನ್ನಿ ಕೇಳಿದ.

ಜಾನ್ ಹೇಳಿದ,"ಅವುಗಳಿಗೆ ಕಾಲೇ ಇಲ್ಲಾ, ಅದರಿಂದ ನನ್ನಪ್ರಕಾರ ಮೀನುಗಳು ಪ್ರಾಣಿಗಳಲ್ಲ."



ಕೊನೆಯಲ್ಲಿ ಬೆನ್ನಿ ಕೇಳಿದ," ಸರಿಯಪ್ಪ, ನೀನೆ ಹೇಳು ನಿನ್ನ ಪ್ರಕಾರ ಚಿಟ್ಟೆ ಏನು?"ಜಾನ್ ಹೇಳಿದ ,"ಇದರ ಉತ್ತರ ನನಗೆ ಗೊತ್ತು , ಚಿಟ್ಟೆ ಕೀಟಗಳ ಗುಂಪಿಗೆ ಸೇರಿದ್ದು , ಅದು ಪ್ರಾಣಿಯಲ್ಲ."ಆದರೆ ನಮ್ಮಅಮ್ಮ ಈ ದೊಡ್ಡಚಿಪ್ಪು ಮತ್ತು ಬಸವನಹುಳುಗಳನ್ನುಸಹ ಪ್ರಾಣಿಗಳು ಅಂದುಕೊಂಡಿದ್ದರೆ" ಅಂದ ಬೆನ್ನಿ. ಜಾನ್ ಬೆನ್ನಿಗೆ ಸಲಹೆ ಕೊಟ್ಟ," ಬಾ, ಹೋಗಿ ಅಮ್ಮನ್ನ ಮತ್ತೆ ಕೇಳೋಣ."

ಅವರಿಬ್ಬರು ಬೆನ್ನಿಯ ತಾಯಿಯ ಬಳಿ ಹೋದರು.

ಬೆನ್ನಿ ಕೇಳಿದ,"ಅಮ್ಮ ನೀವು ದೊಡ್ಡ ಚಿಪ್ಪು ಮತ್ತು ಬಸವನಹುಳುಗಳು ಪ್ರಾಣಿಗಳು ಅಂತ ಹೇಳ್ತೀರಾ?"

"ಹೌದು," ಬೆನ್ನಿಯ ಅಮ್ಮ ಉತ್ತರಿಸಿದರು, "ಯಾವುದೇ ಜೀವಿಯು ಸಸ್ಯವಲ್ಲದಿದ್ದರೆ ಅದು ಪ್ರಾಣಿ."

ಬೆನ್ನಿಕೇಳೀದ ,

"ಹಾಗಾದರೆ, ಜೀವಿತ ವಸ್ತು ಅಂದರೇ ಯವುದು?"



"ಸರಿ," ಬೆನ್ನಿಯ ಅಮ್ಮ ಹೇಳಿದರು, "ನಮ್ಮ ಬೆಕ್ಕು ಒಂದು ಜೀವಂತು ವಸ್ತು, ಆದರೆ ಇಲ್ಲಿರುವ ಕಲ್ಲಲಿ ಜೀವ ಇಲ್ಲಾ, ಇವೆರಡರ ನಡುವೆ ಅಂತರವೇನು?"

ಬೆನ್ನಿ ಉತ್ತರಿಸಿದ," ಕಲ್ಲು ಊಟಾ ಮಾಡುವುದಿಲ್ಲ."

ಜಾನ್ ಹೇಳಿದ,"ಕಲ್ಲು ಬೆಳವಿಯೂದಿಲ್ಲ."

"ಕಾಲ್ಲು ಉಸಿರಾಡುವುದಿಲ್ಲ," ಬೆನ್ನಿ ಯೋಚಿಸಿ ಹೇಳಿದ.

"ತುಂಬಾ ಸಂತೋಷಾ, ಕಲ್ಲು ತನ್ನ ಹಾಗೆ ಕಲ್ಲುಗಳನ್ನುಮಾಡಬಲ್ಲದು." ಅಮ್ಮ ಹೇಳಿದರು.



"ನಿಮ್ಮ ದೊಡ್ಡ ಚಿಪ್ಪಿಗಳು ಮತ್ತು ಬಸವನಹುಳುಗಳು ಈ ಎಲ್ಲವನ್ನು ಮಾಡಬಲ್ಲದು," ಅಮ್ಮ ಮುಂದುವರಿಸಿದರು "ಅವು ಸಸ್ಯಗಳಲ್ಲ.

"ಹಾಗಾ? ಈಗ ನನ್ನ ಅಂದಾಜು, ಅವುಗಳು ನಿಜವಾಗಿಯೂ ಪ್ರಾಣಿಗಳು," ಜಾನ್ ಹೇಳಿದ.

ಬೆನ್ನಿ ಖುಷಿಯಿಂದ ಹೇಳಿದ, "ಹಂಗಿದ್ರೆ ನನ್ನ ನಾಮ ಫಲಕ ಸರಿ!" ಅವುಗಳೆಲ್ಲ 'ಕಡಲಿನ ಜೀವಿಗಳು.'

ಅಂದು ಬೆನ್ನಿ, ಅವನ ಅಪ್ಪ, ಅಮ್ಮ, ತಮ್ಮ ಎಡ್ಡಿ ರಾತ್ರಿ ಊಟ ಮಾಡುತ್ತಿರುವಾಗ ಬೆನ್ನಿ ಕೇಳಿದ,"ಅಪ್ಪ, ನಾವೇಲರು ಪ್ರಾಣಿಗಳಾ?“

"ನೋಡು ..... " ಅವನ ತಂದೆ ಯೋಚಿಸಲಾರಂಭಿಸಿದರು.

ಬೆನ್ನಿ ಹೇಳಿದ,"ನೋಡಿ ಅಪ್ಪ, ನಾವೆಲ್ಲರೂ ಜೀವಂತವಾಗಿದ್ದಿವಿ, ನಾವು ಊಟ ಮಾಡುತ್ತೆವೆ ಮತ್ತು ಉಸಿರಾಡುತ್ತೆವೆ, ಹೌದೋ ಅಲವೋ ?, ಮತ್ತೆ ನಾವು ಸಸ್ಯಗಳಲ್ಲ, ಸರಿ ನ?"

ಅಪ್ಪ ಹೇಳಿದರು,"ಖಂಡಿತ ಸರಿ. "

ಆಗ ಬೆನ್ನಿಕೇಳಿದ,"ಹಾಗಾದರೆ ನಾವು ಪ್ರಾಣಿಗಳಾ?'

ಬೆನ್ನಿಯ ಅಮ್ಮ ಹೇಳಿದರು, "ನೀನು ಹೇಳುತ್ತಿರುವುದು ಸರಿ."

ಅಪ್ಪ ಕೇಳಿದರು,"ಆಗ ನಮಗೂ, ಪ್ರಾಣಿಗಳಿಗೂ ಇರುವ ವ್ಯತ್ಯಾಸವಾದರು ಎನು?"

ಬೆನ್ನಿ ಉತ್ತರಿಸಿದ, "ನಾವು ಮಾತಾಡಬಲ್ಲೆವು ಆದರೆ ಪ್ರಾಣಿಗಳಿಗೆ ಮಾತು ಬರುವುದಿಲ್ಲ."

ಬೆನ್ನಿ ಹೇಳಿದ,"ನಮ್ಮ ತಮ್ಮ ಎಡ್ಡಿ ಏಕ್ದಂ ಪ್ರಾಣಿ, ಏಕೆಂದರೆ ಎಡ್ಡಿಗೆ ಕೂಡಾ ಮಾತು ಬರುವುದಿಲ."

ಆ ಕ್ಷಣದಲ್ಲಿ ಎಡ್ಡಿಯ ಧ್ವನಿ," ಪಾ.... ಪಾ."

"ಸ್ವಲ್ಪ ನೋಡು," ಬೆನ್ನಿ ಅವರ ಅಮ್ಮ ಹೇಳಿದರು.

ಅಮ್ಮ ಮುಂದುವರಿಸಿದರು,"ಎಡ್ಡಿ ಮಾತನಾಡಲು ಕಲಿಯುತ್ತಿದ್ದಾನೆ, ಅವನಿಗು ಪ್ರಾಣಿಗಳಿಗು ವ್ಯತ್ಯಾಸವಿದೆ.“ ಬೆನ್ನಿ ಹೇಳಿದ, "ಆದರೆ ಈಗ ಎಡ್ಡಿ ಪ್ರಾಣಿಗಳ ತರಹನೇ ಇದ್ದಾನೆ."

"ಎನ್ನಿಲಾ, ನೀನು ಸುಮ್ಮನಿರು." ಅಮ್ಮ ಸ್ವಲ್ಪ ಕೋಪದಿಂದ ಹೇಳಿದರು, "ಅವನಿಗೂ ಪ್ರಾಣಿಗಳಿಗು ತುಂಬಾ ಅಂತರವಿದೆ."

ಬೆನ್ನಿ ಸಲಹೆ ನೀಡಿದ," ನಾವು ನಮಗೆ ತಿಳಿದಿರುವ ಪ್ರಾಣಿಗಳ ಬಗ್ಗೆ ಪರೀಕ್ಷಿಸೋಣ್ಣ."

"ಆಮೇಲೆ," ಅಮ್ಮ ಹೇಳಿದರು," ನನ್ನ ಬಳಿ ಒಂದು ಒಳ್ಳೆಯ ಉಪಾಯವಿದೆ, ಮುಂಚೆ ನಮ್ಮ ಮನೆಯಲ್ಲಿರುವ ಹಳೆಯ ಪತ್ರಿಕೆಗಳಿಂದ ಪ್ರಾಣಿಗಳ ಚಿತ್ರಗಳನ್ನು ಕತ್ತರಸಿ ಒಟ್ಟುಗೂಡಿಸು."

ಈ ಕೆಲಸದಲ್ಲಿ ಜಾನ್ ಬೆನ್ನಿಯ ಸಹಾಯ ಮಡಿದ, ಇಬ್ಬರು ಸೇರಿ ಪತ್ರಿಕೆಗಳಲ್ಲಿ ಪ್ರಾಣಿಗಳ ಚಿತ್ರಗಳನ್ನು ಹುಡಕಲಾರಂಬಿಸಿದರು.

ಅವರು ಹುಲಿ, ಚಿರತೆ, ಚಿಟ್ಟೆ ಮತ್ತು ಹಾವುಗಳ ಚಿತ್ರಗಳನ್ನು ಕತ್ತರಿಸಿದರು. ಅವರು ಕೀಟಗಳ, ಕ್ರಿಮಿಗಳ, ಕಪ್ಪೆಗಳ ಮತ್ತು ನಾಯಿಗಳ ಚಿತ್ರಗಳನ್ನು ಕತ್ತಿರಿಸಿದರು. ಕೆಲವು ಪತ್ರಿಕೆಗಳಲ್ಲಿ ಅವರಿಗೆ ಕೋತಿಗಳ, ತಿಮಿಂಗಿಲಗಳ, ಪಕ್ಷಿಗಳ, ಮೀನುಗಳ ಮತ್ತು ಬಸವನಹುಳುಗಳ ಚಿತ್ರಗಳು ಸಿಕ್ಕಿತು.

ಸ್ವಲ್ಪ ಹೊತ್ತಿನಲ್ಲೆ ಚಿತ್ರಗಳ ಒಂದು ದೊಡ್ಡ ಗುಡ್ಡೆ ತಯಾರಾಯಿತು. "ಒಂದೇ ತರಹ ಕಣ್ಣುವ ಚಿತ್ರಗಳನ್ನು ಒಟ್ಟಾಗಿಸೊಣ್ಣ," ಬೆನ್ನಿಯ ಸಲಹೆ.

"ಸರಿ" ಜಾನ್ ಉತ್ತರಿಸಿದ.

ಬೆನ್ನಿ ಒಂದು ಗುಡ್ಡೆಯಲ್ಲಿ , ಚಿಟ್ಟೆಗಳು ಮತ್ತು ಬಾವಲಿಗಳನ್ನು ಇಟ್ಟ, "ಇವುಗಳಿಗೆ ರೆಕ್ಕೆಗಳಿವೆ," ಎಂದು ಹೇಳಿದ.

ಇನ್ನೊಂದು ಗುಡ್ಡೆಯಲ್ಲಿ ಅವನು ಕಿಟೆಗಳನ್ನು ಮತ್ತು ಹಾವುಗಳನ್ನು ಜೋಡಿಸಿದ, "ಏಕೆಂದರೆ ಅವುಗಳು ಉದ್ದಾ ಮತ್ತು ತೆಳಗಿರುತ್ತಾರೆ ", ಎಂದು ಹೇಳಿದ . ಮತ್ತೊಂದು ಗುಡ್ಡೆಯಲ್ಲಿ ನಾಲ್ಕುಕಾಲುಗಳಿರುವ ಪ್ರಾಣಿಗಳ ಚಿತ್ರಗಳನ್ನು ಜೋಡಿಸಿದ.

"ನಾನು ನೀರಿನಲ್ಲಿರುವ ಎಲ್ಲಾ ಪ್ರಾಣಿಗಳನ್ನು ಒಂದು ಗುಂಪಿನಲ್ಲಿ ಇಟ್ಟಿದ್ದೇನೆ," ಜಾನ್ ಹೇಳಿದ. ಅವನು ಮೀನುಗಳು, ಚಿಪ್ಪುಗಳು, ಬಸವನಹುಳುಗಳು ಮತ್ತು ಜೆಲ್ಲಿ ಮೀನುಗಳಿರುವ ಒಂದು ಗುಡ್ಡೆಯನ್ನು ಬೆನ್ನಿಗೆ ತೋರಿಸಿದ.

ಬೆನ್ನಿಹೇಳಿದ, "ಇವೆಲ್ಲಾ ಪ್ರಾಣಿಗಳು ನೋಡಲು ಒಂದೇ ರೀತಿ ಇಲ್ಲ."

"ನನಗೆ ಗೋತ್ತುಂಟು," ಜಾನ್ ಉತ್ತರಿಸಿದ. "ಆದರೂ ಸಹ ಈ ಎಲ್ಲಾ ಜೀವಿಗಳು ಸಮುದ್ರದಲ್ಲೆ ಇರುತ್ತವೆ."

"ಅದರಿಂದೇನೂ ಉಪಯೋಗ ? ಅವೆಲವೂ ಒಂದೇ ರೀತಿ ಕಾಣಿಸಬೇಕೆಂದು ನಾನು ಬಯಿಸುತ್ತೇನೆ.”

ಇಷ್ಟರಲ್ಲಿ ಬೆನ್ನಯ್ಯ ತಂದೆ ಕೊಠಡಿಯ ಒಳಗೆ ಬಂದರು. ಅವರು ಕೇಳಿದರು,"ನೀವು ಎಷ್ಟು ಪ್ರಾಣಿಗಳನ್ನುಹುಡುಕ್ಕಿದಿರಾ?"

ಬೆನ್ನಿ ಉತ್ತರಿಸಿದ,"ಬಹಳಷ್ಟು, ಇಲ್ಲಿ ನೋಡಿ, ಒಂದೇ ತರಹವಾಗಿ ಕಾಣುವ ಪ್ರಾಣಿಗಳನ್ನು ನಾವು ಒಂದು ಗುಂಪಿನಲ್ಲಿ ಇಟ್ಟಿದ್ದೇವೆ."

ಬೆನ್ನಿ ತಂದೆ ಚಿತ್ರಗಳ ಬೇರೆ-ಬೇರೆ ಗುಂಪನ್ನು ವೀಕ್ಷಿಸಿದರು. ಅವರು ಹೇಳಿದರು,"ಇದರಲ್ಲಿ ನನಗೆ ಏನೋ ತಪ್ಪಿದೆ ಎನಿಸುತ್ತಿದೆ."

"ನೀನು ಪಕ್ಷಿಗಳನ್ನು, ಚಿಟ್ಟೆಗಳನ್ನು ಮತ್ತು ಬಾವಲಿಗಳನ್ನು ಒಟ್ಟಿಗೆ ಏಕೆ ಇಟ್ಟಿದೀಯ?" ಬೆನ್ನಿ ಒಡನೆ ಉತ್ತರಿಸಿದ,"ಏಕೆಂದರೆ ಈ ಎಲ್ಲಾ ಪ್ರಾಣಿಗಳಿಗೆ ರೆಕ್ಕೆಗಳಿವೆ."

ಬೆನ್ನಿಯ ತಂದೆ ಹೇಳಿದರು,"ಆದರೆ ಪಕ್ಷಿಗಳ ರೆಕ್ಕೆಗಳು..........."

"ಹಕ್ಕಿಯ ರೆಕ್ಕೆಯಲ್ಲಿ ಗರಿಗಳಿವೆ, ಬಾವಲಿಗೆ ತುಪ್ಪುಳವಿದೆ, ಚಿಟ್ಟೆಗೆ ಚಿಕ್ಕ,ಚಿಕ್ಕ ಮಾಪಕಗಳಿವೆ, ನನ್ನ ಪ್ರಕಾರ ಇವೆಲ್ಲ ಒಂದೆ ಗುಂಪಲ್ಲಿ ಇರೋದು ಸಾಧ್ಯವಿಲ್ಲ."

ಬೆನ್ನಿ ಕೇಳಿದ, "ಇದರ ಬಗ್ಗೆ ನಮಗೆ ಸರಿಯಾದ ಮಾಹಿತಿ ಯಾರು ಕೊಡಬಲ್ಲರು?"

ಬೆನ್ನಿಯ ತಂದೆ ಹೇಳಿದರು, "ನಾನು ನಿಮ್ಮನ್ನು ವಸ್ತುಸಂಗ್ರಹಾಲಯಕ್ಕೆ ಕರೆದುಕೊಂಡು ಹೋಗುತ್ತೇನೆ, ಅಲ್ಲಿ ಯಾರಾದರು ನಿಮ್ಮಗೆ ಸಹಾಯ ಮಾಡಬಲ್ಲರು.”

ನಂತರದ ಶನಿವಾರ ಅಪ್ಪ, ಬೆನ್ನಿ ಮತ್ತು ಜಾನ್ ಇಬ್ಬರನ್ನು ವಸ್ತುಸಂಗ್ರಹಾಲಯಕ್ಕೆ ಕರೆದುಕೊಂಡು ಹೋದರು.

"ಇಲ್ಲಿ ಯಾರಾದರು ನಮಗೆ ಈ ಪ್ರಾಣಿಗಳನ್ನು ಸರಿಯಾಗಿ ವಿಭಜಿಸುವುದಕ್ಕೆ ಸಹಾಯ ಮಾಡಬಲ್ಲರಾ?" ಬೆನ್ನಿಯ ಅಪ್ಪ ಬಾಗಿಲಲಿ ನಿಂತ ಪಹರೆಗಾರನನ್ನು ಕೇಳಿದರು.

ಪಹರೆಗಾರ ಉತ್ತರಿಸಿದ,"ತಾವು ನಾಲ್ಕನೆ ಮಡಿಯಲ್ಲಿರುವ ಪ್ರೊಫೆಸರ್ ವುಡ್ ಅವರನ್ನು ಭೇಟಿಯಾಗಿ."

ಪ್ರೊಫ್. ವುಡ್ ಅವರನ್ನು ಬೇಟ್ಟಿಯಾದ ಕ್ಷಣ, ಬೆನ್ನಿ ಕೇಳಿದ ,"ನಮ್ಮ ಬಳ್ಳಿ ಬಹಳಷ್ಟು ಪ್ರಾಣಿಗಳ ಚಿತ್ರಗಳಿವೆ, ನವ್ವು ಅವುಗಳ್ಳನ್ನು ವಿಭಜಿಸಲು ಇಚ್ಛಿಸುತ್ತೇವೆ, ಇ ಕಾರ್ಯದಲ್ಲಿ ನೀವು ನಮಗೆ ಸಹಾಯಮಾಡಬಲ್ಲಿರಾ, ದಯವಿಟ್ಟು."

ಪ್ರೊಫ್. ವುಡ್ ಕೇಳಿದರು," ಮೊದಲು ನಾನು ನಿಮ್ಮ ಚಿತ್ರಗಳನ್ನು ಸ್ವಲ್ಪ ನೋಡಲಾ?"

ಬೆನ್ನಿ ಮೊದಲು ಕಿಟ್ಟಗಳು ಮತ್ತು ಹಾವುಗಳು ಇರುವ ಗುಂಪನ್ನು ಪ್ರೊಫ್.ವುಡ್ ಗೆ ತೋರಿಸಿದ.

ಪ್ರೊಫ್.ವುಡ್ ಹೇಳಿದರು, "ಇವೆರಡನ್ನು ಒಂದೇ ಗುಂಪಿನಲ್ಲಿಡುವುದು ಸರಿಯಲ್ಲ."

"ಅದ್ಯಕ್ಕೆ?" ಬೆನ್ನಿ ಕೇಳಿದ, "ಇವೆರಡು ನೋಡುವುದಕ್ಕೆ ಒಂದೇ ತರಹ ಕಣ್ಣುತ್ತಾರೆ, ಅಲ್ವ?"

ಪ್ರೊಫ್.ವುಡ್ ಹೇಳಿದರು, "ಆದರೆ ಈ ಮಾತು ಮುಖ್ಯವಲ್ಲ, ನಾವು ಪ್ರಾಣಿಗಳ ರಚನೆ ನೋಡಿ, ಸಮಾನ ರಚನೆಯ ಜೀವಿಗಳನ್ನು ಒಂದು ಸಮೂಹವನ್ನಾಗಿ ಪರಿಗಣಿಸುತ್ತೇವೆ."

"ರಚನೆ, ರಚನೆ ಅಂದರೆ?" ಬೆನ್ನಿ ಕೇಳಿದ

"ಹಾಗೆಂದರೆ," ಪ್ರೊಫ್.ವುಡ್ ಹೇಳಿದರು, "ಪ್ರಾಣಿಗಳ ಅಂಗಗಳು ಮತ್ತು ಆ ಅಂಗಗಳ ರಚನೆಗೆ ಸಂಬಂಧಪಟ್ಟಿದ್ದು."

“ಈ ಪ್ರಾಣಿಗೆ ಬೆನ್ನುಮೂಳೆ ಇದೆಯ,? ಎಂಬುದು ನಮ್ಮ ಮೊದಲ ಪ್ರಶ್ನೆ. "ಎಲ್ಲಾ ಪ್ರಾಣಿಗಳನ್ನು ವೀಕ್ಷಿಸಿದಾಗ ನಾವು ಕಂಡದ್ದು ಒಂದು ಸಮೂಹ ಬೆನ್ನುಮೂಳೆ ಹೊಂದದ್ದು ಮತ್ತೊಂದು ಸಮೂಹದ ಪ್ರಾಣಿಗಲ್ಲಿ ಬೆನ್ನುಮೂಳೆ ಇರುವುದಿಲ್ಲ, ಹೀಗೆ ಪ್ರಾಣಿಗಳುನ್ನು ಎರಡು ದೊಡ್ಡ ಗುಂಪಿನಲ್ಲಿ ಬಾಗಮಾಡಲಾಗಿದೆ. "

"ಎರಡೆ ಸಮೂಹಗಳಲ್ಲಿ?" ಬೆನ್ನಿ ಆಶ್ಚರ್ಯದಿಂದ ಕೇಳಿದ.

"ಇದು ಆರಂಭ ಮಾತ್ರ" ಪ್ರೊಫೆಸರ್ ಹೇಳಿದರು "ಈ ಚಿತ್ರಗಳನ್ನು ಮೊದಲು ಎರಡು ಗುಂಪಾಗಿಸಿ, ಮೊದಲನೆಯ ಸಮೂಹದಲ್ಲಿ ಬೆನ್ನುಮೂಳೆ

ಇರುವ ಪ್ರಾಣಿಗಳನ್ನು ಜೋಡಿಸಿ, ಎರಡನೆಯ ಸಮೂಹದಲ್ಲಿ ಬೆನ್ನುಮೂಳೆ ಇಲ್ಲದಿರುವ ಪ್ರಾಣಿಗಳನ್ನು ಸೇರಿಸಿ. ಒಂದು ವಿಷಯ ಗಮನವಿರಲಿ, ಪ್ರತಿಯೊಂದು ಮೂಳೆ ಇರುವ ಪ್ರಾಣಿಗೆ ಬೆನ್ನುಮೂಳೆ ಇರುತ್ತದೆ. ಈ ಕೆಲಸಾ ಮಾಡಿ ಮತ್ತೆ ಬನ್ನಿ, ಆಗ ನಾನು ನಿಮ್ಮ ಸಹಾಯ ಮಾಡುತ್ತೇನೆ."

"ಸರಿ," ಅಂದಾ ಬೆನ್ನಿ.

'ಓಕೆ' ಅಂದಾ ಜಾನ್.

"ತುಂಬಾ ಧನ್ಯವಾದಗಳು," ಬೆನ್ನಿಯ ತಂದೆ ಹೇಳಿದರು.

"ಬೇಗ ಮರಳಿ ಬನ್ನಿ" ಪ್ರೊಫ್. ವುಡ್ ಮುಗುಳುನಗೆಯೊಂದಿಗೆ ನುಡಿದರು.

ಮರುದಿನ ಬೆನ್ನಿ ಮತ್ತು ಜಾನ್ ಆ ಚಿತ್ರಗಳನ್ನು ಗಮನವಿಟ್ಟು ಮತ್ತೆ ನೋಡಿದರು.

ಬೆನ್ನಿ ಕೇಳಿದಾ, "ಹಕ್ಕಿಗಳಿಗೆ ಬೆನ್ನುಮೂಳೆ ಇರುತ್ತಾ?"

"ಇರುತ್ತೆ, ನೀನು ಯಾವಾತ್ತೂ ಕೋಳಿ ತಿಂಧಿಲವ?" ಜಾನ್ ಕೇಳಿದ.

"ಅರೇ,ಹೌದು! ಎನ್ನುತ್ತಾ ಬೆನ್ನಿ ಹಕ್ಕಿಯ ಚಿತ್ರವನ್ನು ಬೆನ್ನುಮೂಳೆವಿರುವ ಸಮೂಹಕೆ ಸೇರಿಸಿದ.

"ಮತ್ತೆ ಚಿಟ್ಟೆ?" ಜಾನ್ ಕೇಳಿದ.

ಬೆನ್ನಿ ಉತ್ತರಿಸಿದ, "ಅವುಗಳು ಹತ್ತಿಯ ತರಹ ಮೃದುವಾಗಿರುತ್ತೆ."

"ಹಾವು?" ಜಾನ್ ಕೇಳಿದ

"ಫ್ರೆಡ್ಡಿ ಯಾ ಬಳಿ ಒಂದು ಹಾವಿನ ಕಂಕಾಲ (ಅಸ್ತಿಪಂಜರ) ಇದೆ.

ಬೆನ್ನುಮೂಳೆ ಇಲ್ಲದ ಜೀವಿಗಳು

"ಅಂದರೆ ಹಾವನ್ನು ಬೆನ್ನುಮೂಳೆ ಇರುವ ಸಮೂಹದಲ್ಲಿ ಇಡೋಣ" ಬೆನ್ನಿ ಹೇಳಿದ.

"ಕೀಟಗಳು?" ಜಾನ್ ಕೇಳಿದ.

"ಅವುಗಳಿಗೆ ಬೆನಿನ ಮೂಳೆ ಇರುವುದಿಲ್ಲಾ," ಬೆನ್ನಿ ಹೇಳಿದ.

"ಮೀನು?" ಜಾನ್ ಕೇಳಿದ

"ನನಗೆ ಗೊತ್ತು ಅವು ಯಾವ ಸಮೂಹಕ್ಕೆ ಸೇರುತ್ತದೆ ಎಂದು, ಪ್ರತಿಯೊಂದು ಬರಿ ನಾನು ಮೀನು ತಿಂದಾಗ ನನಗೆ ಮೀನಿನ ಬೆನ್ನೆಲಬು ಕಾಣಿಸುತ್ತೆ."

"ಈ ಚಿಪ್ಪುಗಳು ಯಾವ ಗುಂಪಿಗೆ ಸೇರುತ್ತೆ?" ಬೆನ್ನಿ ಕೇಳಿದ.

ಜಾನ್ ಹೇಳಿದ, "ಚಿಪ್ಪಿನ ಗಟ್ಟಿ ಭಾಗಾ ಹೊರಗಡೆಯೇ ಇರುತ್ತದ್ದೆ, ನನ್ನೋಮ್ಮೆ ಒಂದು ದೊಡ್ಡ ಬಸವನಹುಳುವನ್ನು ತಿಂದಿದ್ದೆ,ಅದು ಒಳಗಡೆ ತುಂಬಾ ಮೃದುವಾಗಿತ್ತು. ಅದರಿಂದ ನಾವು ಇದನ್ನು ಬೆನ್ನುಮೂಳೆ ಇಲ್ಲದಿರುವ ಸಮೂಹಕ್ಕೆ ಸೇರಿಸೋಣ."

ಬೆನ್ನಿ ಹೇಳಿದ, "ನಾನು ಒಂದು ದೊಡ್ಡ ಚಿಪ್ಪನ್ನು ತಿಂದಿದ್ದೆ, ಅದು ಕೂಡಾ ಒಳಗಡೆ ಮೃದುವಾಗಿತ್ತು."

ಜಾನ್ ಹೇಳಿದ, " ಸರಿ, ಅದನ್ನು ಬೆನ್ನುಮೂಳೆ ಇಲದಿರುವ ಸಮೂಹಕ್ಕೆ ಕಳಿಸೋಣಾ"

ಅವರು ಕೋತಿಗಳನ್ನು, ಚಿರತೆಗಳನ್ನು, ಸಿಂಹಗಳನ್ನು, ಆನೆಗಳನ್ನು, ಜಿಂಕೆಗಳನ್ನು, ನಾಯಿಗಳನ್ನು ಮತ್ತು ಬೆಕ್ಕುಗಳನ್ನು ಬೆನ್ನುಮೂಳೆ ಇರುವ ಸಮೂಹದಲ್ಲಿ ಸೇರಿಸಿದರು. ಜಾನ್ ಹೇಳಿದ, "ಇವು ಬೆನ್ನುಮೂಳೆ ಹೊಂದಿರುತ್ತವೆಯಂದು ನನಗೆ ಚೆನ್ನಾಗಿ ಗೊತ್ತು. "

ಬೆನ್ನುಮೂಳೆ ಇರುವ ಜೀವಿಗಳು



ಉಳಿದಿರುವ ಜೀವಿಗಳನ್ನು ಎಲ್ಲಿಡಬೇಕ್ಕೆಂದು ಬೆನ್ನಿ ಮತ್ತು ಜಾನ್ ಗೆ ಅರ್ಥವಾಗಲಿಲ್ಲಾ.

ಅವರು ಅವುಗಳನ್ನು ಮುರನ್ನೆ ಸಮೂಹ ಮಾಡಿದರು.

ಬೆನ್ನಿ, ಜಾನ್ ಮತ್ತು ಬೆನ್ನಿಯ ತಂದೆ ಮತ್ತೆ ಪ್ರೊಫೆಸರ್. ವುಡ್ ನ್ನು ಭೇಟಿ ಮಾಡಿದರು.

ಪ್ರೊಫೆಸರ್ ಚಿತ್ರಗಳ ಗುಂಪನ್ನು ನೋಡಿ ಹೇಳಿದರು, "ಶಭಾಷ್. ಈ ಮೂರನೇ ಸಮೂಹದಲ್ಲಿ ಎನಿದೆ?"

"ಈ ಜೇವಿಗಳನ್ನು ಎಲ್ಲಿಡಬೇಕೆಂದು ನಮಗೆ ಗೊತ್ತಾಗಲಿಲ್ಲ," ಬೆನ್ನಿ ಸ್ಪಷ್ಟಿಪಡಿಸಿದ.

ಪ್ರೊಫೆಸರ್.ವುಡ್ ಮೂರನೆ ಸಮೂಹದ ಜೇವಿಗಳನ್ನು ನೋಡಿ ಹೇಳಿದರು, "ಈ ಏಡಿ ಮತ್ತು ನಕ್ಷತ್ರಮೀನುಗಳು ಬೆನ್ನುಮೂಳೆ ಇಲ್ಲದ ಸಮೂಹಕ್ಕೆ ಸೇರುತ್ತವೆ . ಅವು ಹೊರಗಡೆಯಿಂದ ಕಠೋರವಾಗಿರುತ್ತವೆ, ಆದರೆ ಅವುಗಳ ಒಳಗಡೆ ಒಂದು ಮೂಳೆಯು ಇರುವುದಿಲ್ಲಾ."

"ಈ ಕಪ್ಪೆ ಬೆನ್ನುಮೂಳೆ ಇರುವ ಸಮೂಹದಲ್ಲಿ ಹೋಗುತ್ತದೆ."

ಇದಾದಮೇಲೆ ಪ್ರೊಫೆಸರ್.ವುಡ್ ಬೆನ್ನುಮೂಳೆ ಇರುವ ಪೂರ್ತಿ ಸಮೂಹವನ್ನು ಕುರಿತು ಹೇಳಿದರು, "ನಿಮಗೆ ನೆನಪಿದೆತಾನೇ, ನಾನು ಹೇಳಿದ್ದೆ ಇದು ಬರೀ ಅರಾಂಬ ಅಂತಾ, ಇಗಾ ನಾವು ಈ ಸಮೂಹವನ್ನು ಐದು ಗುಂಪುಗಳಾಗಿ ಹಂಚಬಹುದು."

ಮೊದಲಾ ಗುಂಪಿನಲ್ಲಿ ಮೀನುಗಳು, ಎರಡನೆಯ ಗುಂಪಿನಲ್ಲಿ ನೀರಿನಲ್ಲಿ ಮತ್ತು ಭೂಮಿಯ ಮೇಲೆ ಇರಬಲ್ಲ ಜೀವಿಗಳು -

"ಅವು ತಮ್ಮ ಶ್ಯಶವಾಸ್ಥೆಯನ್ನು ನೀರಿನಲ್ಲಿ ಕಳೆಯುತ್ತಾರೆ ಮತ್ತು ದೊಡ್ಡವರಾದ ಮೇಲೆ ಭೂಮಿಗೆ ಬರುತ್ತಾರೆ. ಕಪ್ಪೆ ಈ ಸಮೂಹಕ್ಕೆ ಯೋಗ್ಯ ಉದಾಹರಣೆ. "

ಮೂರನೆಯ ಸಮೂಹ ಹರಿದಾಡುವ ಜಂತು (ಸರಿಸರ್ಪಗಳು) ಅದರಲ್ಲಿ - ಹಾವು, ಹಲ್ಲಿ, ಆಮೆ ಮತ್ತು ಮೊಸಳೆ ಸೇರಿರುತ್ತವೆ.

ನಾಲ್ಕನೆಯ ಸಮೂಹದಲ್ಲಿ ಪಕ್ಷಿಗಳು - ಈ ಸಮೂಹದಲಿ ಎಲ್ಲಾ ಜೀವಿಗಳಿಗು ರೆಕ್ಕೆ ಇರುತ್ತವೆ.

ಕೊನೆಯ ಸಮುಹದಲ್ಲಿ ಸಸ್ತನಿಗಳು (ಮ್ಯಾಮಲ್ಸ್) - ಅವರ ಶರೀರದಮೇಲೆ ಕೂದಲು ಅಥವಾ ತುಪ್ಪಳ ಇರುತ್ತದೆ.

ಮನೆಗೆ ಹೋದಮೇಲೆ ನೀವು ಬೆನ್ನುಮೂಳೆಯ ಸಮೂಹವನ್ನು ಈ ಏದು ಗುಂಪಿನಲ್ಲಿ ಹಂಚಿ, ಮೀನು, ನೀರು ಮತ್ತು ಭೂಮಿ ಎರಡರ ಮೇಲೆ ಇರುವ ಜೀವಿಗಳು (ಉಭಯಚರಗಳು), ಹರಿದಾಡುವ ಜಂತು (ಸರಿಸರ್ಪಗಳು), ಪಕ್ಷಿಗಳು ಮತ್ತು ಸಸ್ತನಿಗಳು (ಮ್ಯಾಮಲ್ಸ್)."

"ಬೆನ್ನುಮೂಳೆ ಇಲ್ಲದಿರುವ ಜೀವಿಗಳ ಸಮೂಹವನ್ನು ಏನು ಮಾಡುವುದು?" ಬೆನ್ನಿ ಕೇಳಿದ.

ಪ್ರೊಫೆಸರ್ ಉತ್ತರಿಸಿದರು," ಈ ಸಮಯ ಮಾಡೋಕ್ಕೆ ನಿಮಗೆ ಸಾಕಷ್ಟು ಕೆಲಸವಿದೆ."

"ಬೆನ್ನುಮೂಳೆ ಇಲ್ಲದಿರುವ ಜೀವಿಗಳ ಸಮೂಹದ ಕುರಿತು ತಿಳಿದುಕೊಳಲು ಮತ್ತೆ ನಿಮ್ಮ ಬಳಿಗೆ ಮರಳಿ ಬರಬಹುದಾ?“ "ಖಂಡಿತ," ಪ್ರೊಫೆಸರ್. ವುಡ್ ಉತ್ತರಿಸಿದರು.

ಬೆನ್ನಿ ಕೇಳಿದ, "ಅದಾದ ಮೇಲೆ ನಮಗೆ ಪ್ರಾಣಿಗಳನ್ನು ಬೇರೆ-ಬೇರೆ ಸಮೂಹಗಳಾಗಿ ವಿಭಜಿಸುವ ಬಗ್ಗೆ ಪೂರ್ತಿಯಾಗಿ ಅರ್ತವಾಗುತ್ತದೆಯಾ?"

"ಪೂರ್ತಿ ಅಂತು ಆಗಲ್ಲ, ಆದರೆ ಹೌದು, ಸ್ವಲ್ಪ ಆದರೂ ಖಂಡಿತ ಅರ್ತವಾಗುತ್ತದೆ. ನಂತರ ನೀವು ಈ ಚಿಕ್ಕ ಸಮೂಹಗಳನ್ನು ಇನ್ನು ಚಿಕ್ಕ-ಚಿಕ್ಕ ಸಮೂಹಗಳಾಗಿ ಭಾಗಿಸುವುದನ್ನು ಕಲಿಯಬಲ್ಲಿರಿ." ಪ್ರೊಫೆಸರ್.ವುಡ್ ಹೇಳಿದರು. ಬೆನ್ನಿ ಕೇಳಿದ, "ನಿಮ್ಮ ಪ್ರಕಾರ ಬೆನ್ನುಮೂಳೆ ಇರುವ ಜೀವಿಗಳ ಸಮೂಹವನ್ನು ನಾವು ಐದು ಗುಂಪಾಗಿ ಭಾಗಾ ಮಾಡಿದಮೇಲೆ, ಈ ಭಾಗಗಳನ್ನು ನಾವು ಇನ್ನು ಚಿಕ-ಚಿಕ್ಕ ಸಮೂಹಗಳನ್ನಗಿ ವಿಭಜಿಸ ಬಹುದು, ಸರೀನಾ?"

"ಹೌದು ನಿಜ, ಪ್ರಪಂಚದಲ್ಲಿ ಸುಮಾರು ೧೭,೦೦೦ ತರಹದ ಮೀನುಗಳಿವೆ ಮತ್ತು ಸಾವಿರಾರು ತರಹದ ಉಭಯಚರಗಳು,ಸರಿಸರ್ಪಗಳು, ಪಕ್ಷಿಗಳು ಮತ್ತು ಸಸ್ತನಿಗಳು ಇವೆ. ಪ್ರತಿಯೊಂದು ಸಮೂಹವನ್ನು ಇನ್ನು ಚಿಕ್ಕ-ಚಿಕ್ಕ ಭಾಗಗಳಾಗಿ ಮಾಡ ಬಹುದು," ಪ್ರೊಫೆಸರ್ ಹೇಳಿದರು.

"ನನಗೆ ಅನ್ನಿಸತ್ತೆ ಇದೆಲ್ಲ ಮಾಡಲು ನಮಗೆ ತುಂಬಾ ಸಮಯ ಬೇಕಾಗುತ್ತದೆ," ಬೆನ್ನಿ ಹೇಳಿದ.

"ನಿನಗೆ ಇದರಲ್ಲಿ ರುಚಿಯಿದ್ದರೆ, ನೀನು ಈ ಕೆಲಸದಲ್ಲಿ ನಿನ್ನ ಜೀವನ ಪೂರ್ತಿ ಸಾಗಿಸಬಹುದು, ನಾನು ನನ್ನ ಜೀವನ ಪೂರ್ತಿ ಇದನ್ನೇ ಮಾಡಿದ್ದೇನೆ,“ ಪ್ರೊಫೆಸರ್ ಹೇಳಿದರು.

"ಪೂರ್ತಿ ಜೀವನಾ?" ಆಶ್ಚರ್ಯದಿಂದ ಬೆನ್ನಿ ಕೇಳಿದ.

"ನಂಬಕ್ಕೆ ಅಗಲ್ಲಾ" ಜಾನ್ ಕೂಗಿದ.

"ಹೌದೂ" ಪ್ರೊಫೆವ್ಸ್.ವುಡ್ ಹೇಳಿದರು.

"ಆದರೆ ನಿಮಗೆ ಅದೆಲ್ಲ ಮಾಡುವ ಅಗತ್ಯವಿಲ್ಲ, ನಿಮ್ಮ ರುಚಿ ಮುಖ್ಯ ಸಮೂಹಗಳನ್ನು ತಿಳಿದುಕೊಳ್ಳುವ ತನಕ, ಅಷ್ಟೇಯಾ," ಪ್ರೊಫೆಸರ್.ವುಡ್ ಹೇಳಿದರು.

ಪ್ರೊಫೆಸರ್ ಹೇಳಿದರು,"ಮತ್ತು ಎಲ್ಲಾ ಬೇರೆ-ಬೇರೆ ಚಿಕ್ಕ-ಚಿಕ್ಕ ಸಮೂಹಗಳನ್ನು ಇಗ ತಿಳಿದುಕೊಳವದು ಅಷ್ಟು ಅಗತ್ಯವಿಲ್ಲ."

"ಹಂಗಾದರೆ ಎಲ್ಲಾಕಿಂತ ಮುಖ್ಯ ವಾದದ್ದು ಏನು?" ಬೆನ್ನಿ ಕೇಳಿದ.

ಪ್ರೊಫೆಸರ್ ಉತ್ತರಿಸಿದರು,"ನೀವು ಪ್ರಾಣಿಗಳನ್ನು ವಿಭಜಿಸಲು ಕಲಿಯುತ್ತಿದಿರಿ, ಆದರೆ ನಾನು ಈ ಎಲ್ಲಾ ಸಮೂಹಗಳನ್ನು ಒಟ್ಟುಗೂಡುಸುತ್ತೀನಿ, ಇದನ್ನು ಮಾಡುವುದರಲ್ಲಿ ನನ್ನ ಎಲ್ಲಾ ಸಮಯವನ್ನು ಕಳೆಯುತಿದ್ದೇನೆ."

ಜಾನ್ ಕೇಳಿದ, "ನೀವು ಈ ಪ್ರಾಣಿಗಳನ್ನು ಹೇಗೆ ಒಟ್ಟುಗೂಡುಸುತ್ತೀರಾ?"

"ನಾನು ಈ ಜೀವಿಗಳ ನಡುವೆ ಇರುವ ಸಂಬಂದವನ್ನು ತಿಳಿದುಕೊಳಲು ಪ್ರಯತ್ನಿಸುತ್ತೇನೆ," ಪ್ರೊಫೆಸರ್ ಮುಗುಳುನಗೆಯೊಂದಿಗೆ ಹೇಳಿದರು .

ಬೆನ್ನಿ ಕಿರುನಗೆಯೊಂದಿಗೆ ಕೇಳಿದ," ಏನು, ಪ್ರಾಣಿಗಳಿಗೂ ನೆಂಟರು ಇರುತ್ತಾರಾ?"

"ಹೌದು," ಪ್ರೊಫೆಸರ್.ವುಡ್ ಹೇಳಿದರು, "ಆದರೆ ಒಂದೊಂದು ಪ್ರಾಣಿಗಲ್ಲಾ, ಒಂದೇ ತರಹ ಕಾಣುವ ಪ್ರಾಣಿಗಳಿಗೆ ನೆಂಟರು ಖಂಡಿತಾ ಇರುತ್ತಾರೆ. "

"ನಿಜಾನಾ," ಬೆನ್ನಿ ಆತುರತೆಯಿಂದ ಕೇಳಿದ.

"ನಿನ್ನ ಮೂಖ ನಿನ್ನ ಎರಾದರು ದೊಡಪ್ಪ, ಮಾವ ಅಥವಾ ಚಿಕ್ಕಪ್ಪನ ಮಗನ ಮುಖದ ಜೊತೆ ಹೋಲುತ್ತದೆಯಾ," ಪ್ರೊಫೆಸರ್.ವುಡ್ ಕೇಳಿದರು.

"ಹೌದು, ನನ್ನ ಚಿಕ್ಕಪ್ಪನ ಮಗ ನೋಡುವುದಕ್ಕೆ ಬಹುತೆಕ್ಕ ನನ್ನ ತರಹಾನೆ ಇರುತ್ತಾನೆ."

"ಹೀಗೇಕೆ ಆಗುತ್ತದೆ, ನಿನಗೆ ಗೋತ್ತಾ?" ಪ್ರೊಫೆಸರ್ ಕೇಳಿದರು.

ಬೆನ್ನಿ ಉತ್ತರಿಸಿದ, "ಇಲ್ಲಾ ನನಗೆ ಗೊತ್ತಿಲ್ಲ."

ಪ್ರೊಫೆಸರ್ ಕೇಳಿದರು,"ನಿನ್ನ ಮತ್ತು ಚಿಕ್ಕಪ್ಪನ ಮಗನಾ ತಾತ ಒಬ್ಬರೇ ಅಲ್ಲವಾ?"

ಬೆನ್ನಿ ಸ್ವಲ್ಪ ಹೊತ್ತು ಯೋಚಿಸಿ ಹೇಳಿದ, "ಹೌದು, ಇದು ನಿಜ."

ಪ್ರೊಫೆಸರ್.ವುಡ್ ಕೇಳಿದರು, "ಎರಡು ಬೇರೆ-ಬೇರೆ ತರಹದ ಜೀವಿಗಳ ರಚನೆ ಒಂದೇ ಸಮಾನಾ ಹೇಗೇ ಸದ್ಯ, ಬಹುಶಃ ಇವಾಗ ನೀನು ಇದಕ್ಕೆ ಉತ್ತರ ಕೊಡಬಲ್ಲೆ."

"ಬಹುಶಃ ಈ ಪ್ರಾಣಿಗಳ ತಾತ, ಮುತ್ತಾತ ಒಬ್ಬರೆ ಇದ್ದಿರಬಹುದು." ಬೆನ್ನಿ ಹೇಳಿದ.

"ನಿನ್ನ ಉತ್ತರ ಸ್ವಲ್ಪ-ಸ್ವಲ್ಪ ಸರಿ," ಪ್ರೊಫೆಸರ್ ಹೇಳಿದರು.

"ತಾತ, ಮುತ್ತಾತ ಅಂದಗಾ ನಮ್ಮ ಅರ್ಥದಲ್ಲಿ ಲಕ್ಷ-ಕೋಟಿ ವರುಷಗಳ ಹಿಂದಿನ ಜೀವಿಗಳು, ನಡೀರಿ ನಾನು ನಿಮಗೆ ಒಂದು ಕಥೆ ಹೇಳುತೇನೆ."

ಪ್ರೊಫೆಸರ್ ಹೇಳಿದರು, "ಇವತ್ತಿನಿಂದ ಸುಮಾರು ಐದು ಕೋಟಿ ವರ್ಷಗಳ ಮುಂಚೆ ಒಂದು ಪ್ರಾಣಿಯಿತ್ತು. ಅದರ ತಲೆ ನರಿಯ ತಲೆಯ ತರಹ ಇತ್ತು. ಅದರ ಬಾಲ ಉದ್ದವಾಗಿತ್ತು. ಅದರ ಹಲ್ಲು ಮತ್ತು ಉಗುರುಗಳು ಚೂಪಾಗಿದ್ದವು. ಆ ತರಹದ ಪ್ರಾಣಿಯಿಂದ ನಂತರ ಹುಲಿ, ಚಿರತೆ, ತೋಳ ಮತ್ತು ಬೆಕ್ಕುಗಳು ಹುಟ್ಟಿಕೊಂಡವು. ಈ ಎಲ್ಲಾ ಪ್ರಾಣಿಗಳು ಪರಸ್ಪರ ಸಂಬಂಧಿಕರು."

"ನನಗೆ ಅರ್ಥವಾಯಿತು," ಬೆನ್ನಿ ಹೇಳಿದ.

ಪ್ರೊಫೆಸರ್ ಹೇಳಿದರು," ಇವರೆಲ್ಲರೂ ಪರಸ್ಪರ ನೆಂಟರು ಆಗಿರಬೆಕ್ಕು ಅಂದರೆ, ಅವರ ಒಬ್ಬ ಪುರ್ವಜರನ್ನು ನಾವು ಹುಡುಕಲೇಬೆಕ್ಕು."

ಜಾನ್ ಹೇಳಿದ, "ನಡಿ, ನಡಿ ಮೊದಲು ನಾವು ನಮ್ಮ ಪ್ರಾಣಿಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸೋಣ."

"ಹಾಗಾದ್ರೆ, ನಾವು ಪೂರ್ವಜರನ್ನು ಹುಡುಕುವ ಪತ್ತೇದಾರರ ಆಗಿಬಿಡುತ್ತೇವೆ," ಬೆನ್ನಿ ಹೇಳಿದ.

ಕೊನೆಯಲ್ಲಿ ಪ್ರೊಫೆಸರ್.ವುಡ್ ಹೇಳಿದರು, "ನಾನು ಯಾವತ್ತೂ ಈ ತರಹ ಯೋಚಿಸಲಿಲ್ಲ, ನಿಜವಾಗಲೂ ಇದೆ (ಪೂರ್ವಜರ ಪತ್ತೇದಾರ) ನನ್ನ ವೃತ್ತಿ!"



अंत